**ಎರಡನೇಯ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ ,**
**ಉಡುಪಿ ಜಿಲ್ಲೆ , ಉಡುಪಿ**

**<u>ಸೆಷನ್ಸ್ ಕೇಸ್ ನಂಃ 27/2017</u>** **<u>ಫ್ರಾ.ಸಾ.12</u>**

**<u>ಚಾ.ಸಾ.9</u>**

| | | |
|---|---|---|
| ಸಾಕ್ಷಿದಾರರ ಹೆಸರು | - | ರಾಜೇಶ್ ನಾಯಕ್ |
| ತಂದೆಯ ಹೆಸರು | - | ಜಗನ್ನಾಥ್ ನಾಯಕ್ |
| ವಯಸ್ಸು | - | 31 ವರ್ಷ |
| ಉದ್ಯೋಗ | - | ಚಾಲಕ |
| ವಿಳಾಸ | - | ಪರ್ಕಳ |

ದಿನಾಂಕಃ 03-07-2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**<u>ಮುಖ್ಯ ವಿಚಾರಣೆಃ ಸರಕಾರಿ ಅಭಿಯೋಜಕರಿಂದಃ</u>**

ಚಾಸಾ1 ರವರ ಪರಿಚಯ ಇರುವುದಿಲ್ಲ. ಆರೋಪಿತರ ಪರಿಚಯ ಇಲ್ಲ. ಚಾಸಾ 1 ಆರೋಪಿತರ ವಿರುದ್ದ ನೀಡಿದ ದೂರಿನ ಬಗ್ಗೆ ನನಗೆ ಯಾವುದೇ ಮಾಹಿತಿ ಇಲ್ಲ. ಆದರೆ ಸುಮಾರು 8 ವರ್ಷದ ಹಿಂದೆ ಮಣಿಪಾಲ ಪೊಲೀಸರು ನನ್ನನ್ನು ಠಾಣೆಗೆ ಕರೆದು ಒಂದು ದಾಖಲೆಗೆ ನನ್ನ ಸಹಿ ಪಡದಿರುತ್ತಾರೆ. ಅದರಲ್ಲಿ ಬರೆದಿರುವ ಸಂಗತಿಗಳು ನನಗೆ ತಿಳಿದಿರುವುದಿಲ್ಲ. ನನ್ನ ಸಮಕ್ಷಮದಲ್ಲಿ ಪೊಲೀಸರು ಈ ಪ್ರಕರಣದ ತಕ್ಷೀರು ಸ್ಥಳವನ್ನು ಪರಿಶೀಲಿಸಿ ಸ್ಥಳ ಮಹಜರು ತಯಾರಿಸಿರುವುದಿಲ್ಲ. ಈಗ ತೋರಿಸಿದ ತಕ್ಷೀರು ಸ್ಥಳದ ಮಹಜರಿನಲ್ಲಿರುವ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಸಾಕ್ಷಿಯ ಸಹಿಯನ್ನು ನಿ.ಪಿ.4(ಡಿ) ಎಂದು ಗುರುತಿಸಲಾಯಿತು.

**( ಈ ಹಂತದಲ್ಲಿ ಅಭಿಯೋಜಕರ ವಿನಂತಿಯ ಮೇರೆಗೆ ಈ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟಿ ಸವಾಲು ಮಾಡಲು ಅಭಿಯೋಜಕರಿಗೆ ಅನುಮತಿ ನೀಡಲಾಯಿತು.)**

**<u>ಪಾಟಿ ಸವಾಲುಃ ಸರಕಾರಿ ಅಭಿಯೋಜಕರಿಂದಃ</u>**

ದಿನಾಂಕ 05-01-2017 ರಂದು ಪೊಲೀಸರು ನನ್ನ ಸಮಕ್ಷಮದಲ್ಲಿ ಚಾಸಾ1 ರವರು ತೋರಿಸಿದ ಹೆರ್ಗ ಗ್ರಾಮದ ಸಮ್ರಕ್ಕಿ ಬೆಟ್ಟು ಎಂಬಲ್ಲಿರುವ ಮನೆ ನಂಬ್ರ 7-134-1 ರ ಸ್ಥಳವನ್ನು ತೋರಿಸಿ ಕೊಟ್ಟಿದ್ದು, ಸದ್ರಿ ಸ್ಥಳವನ್ನು ಪೊಲೀಸರು ಪರಿಶೀಲಿಸದಾಗ ಮನೆಯ ಕಿಟಕಿಯ ಗಾಜುಗಳು

ಒಡೆದಿದ್ದು, ಅವುಗಳನ್ನು ಪೋಲಿಸರು ಅಮಾನತುಪಡಿಸಿಕೊಂಡಿದ್ದು, ಅಲ್ಲದೇ ಮನೆಯಲ್ಲಿದ್ದ ಕಬ್ಬಿಣದ ಕಪಾಟನ್ನು ಯಾವುದೋ ಸಾದನದಿಂದ ಮೀಟಿ ಜಖಂ ಗೊಳಿಸಿದ್ದು ಮತ್ತು ಮನೆಯ ಒಳಗಡೆ ಇರುವ ದೇವಿ ಪೀಟ ಅಗೆದ ಕುರುಹುಗಳು ಕಂಡು ಬಂದಿದ್ದು, ಆ ದೇವಿ ಪೀಟ ಜಖಂ ಗೊಂಡಿದ್ದು, ಇವುಗಳನ್ನೆಲ್ಲ ಪೊಲೀಸು ಪರಿಶೀಲಿಸಿ ನಿ.ಪಿ.4 ರಂತೆ ಮಹಜರು ಬರೆದು ಸ್ಥಳದಲ್ಲಿ ನನ್ನ ಸಹಿ ಪಡಿದುಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಆರೋಪಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಆರೋಪಿತರ ಪರವಾಗಿ ಪಾಟೀ ಸವಾಲುಃ** ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

ಓದಿ ಹೇಳಲಾಗಿ ಕೇಳಿ ಸರಿ ಇದೆ ಎಂದು ಒಪ್ಪಿದರು.

ಎರಡನೇಯ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಉಡುಪಿ.